IJCRT.ORG ISSN : 2320-2882

INTERNATIONAL JOURNAL OF CREATIVE RESEARCH THOUGHTS (IJCRT)

An International Open Access, Peer-reviewed, Refereed Journal

# ಮೈಸೂರು ಒಡೆಯರ ಕಾಲದ ಅಶ್ವದಳ

**ಡಾ. ನಾಗೇಶ ಹೆಚ್.ಎ**
**ಹನುಮಾಪುರ, ಕಲ್ಯಾ ಅಂಚೆ**
**ಮಾಗಡಿ ತಾ., ರಾಮನಗರ ಜಿ. 562120.**

ಪ್ರಾಚೀನ ಕಾಲದಿಂದಲೂ ಸಹ ಕುದುರೆಗಳು ಸೈನ್ಯದಲ್ಲಿ ಒಂದು ಭಾಗವಾಗಿದ್ದು ಇವುಗಳ ಪ್ರತ್ಯೇಕವಾದ ಒಂದು ಪಡೆಯಿತ್ತು. ಭಾರತದ ಪ್ರಾಚೀನ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳಲ್ಲೂ ಸಹ ಅಶ್ವದಳದ ಉಲ್ಲೇಖಗಳಿವೆ. ಪ್ರಾಚೀನ ಭಾರತದ ರಾಜಮನೆತನವಾಗಿದ್ದ ಮೌರ್ಯರಿಂದಲೂ ಪ್ರಚಲಿತವಿದ್ದಿತು. ಇದು ಮುಂದುವರೆದು ಕರ್ನಾಟಕದಲ್ಲಿ ಕ್ರಿ.ಶ.7ನೆಯ ಶತಮಾನದಲ್ಲಿಯೇ ಅಶ್ವಸೇನೆಯು ಅಸ್ತಿತ್ವದಲ್ಲಿತ್ತು. ವಿಜಯನಗರ ಕಾಲದಲ್ಲಿ ಅಶ್ವದಳಕ್ಕೆ ಹಿಂದೆಂದಿಗಿಂತಲೂ ಹೆಚ್ಚಿನ ಸ್ಥಾನ ಮತ್ತು ಪ್ರಾಶಸ್ತ್ಯವನ್ನು ನೀಡಲಾಗಿತ್ತು.

ಸೈನ್ಯದಲ್ಲಿ ಅಶ್ವದಳದ ಪಾತ್ರವು ಮಹತ್ವವಾಗಿದ್ದು ಚಟುವಟಿಕೆಯುಳ್ಳದ್ದಾಗಿತ್ತು. ಈ ಪಡೆಯ ಕರ್ತವ್ಯಗಳನ್ನು ಕೌಟಲ್ಯನು ಸುದೀರ್ಘವಾಗಿ ವಿವರಿಸಿದ್ದಾನೆ. ಕುದುರೆಯ ಸೈನ್ಯವು ಶಿಬಿರವನ್ನು ಏರ್ಪಡಿಸುವ ಭೂಮಿಯಲ್ಲಿ ಶತ್ರು ಸೈನ್ಯವನ್ನು ಓಡಿಸುವ, ಸೈನ್ಯವು ಬೀಡುಬಿಟ್ಟಲ್ಲಿ ಉಪದ್ರವ ಇಲ್ಲದಂತೆ ಮಾಡುವ, ದಾರಿಯಲ್ಲಿ ಸಿಕ್ಕುವ ಕಳ್ಳರನ್ನು ಓಡಿಸುವ ಕಾರ್ಯಗಳನ್ನು ಮಾಡಬೇಕು. ಶಿಬಿರಕ್ಕೆ ಯೋಗ್ಯವಾದ ಪ್ರದೇಶವನ್ನು ಮೊದಲು ಆಯ್ಕೆ ಮಾಡಿಕೊಳ್ಳಬೇಕು ಜಲಾಶಯಗಳನ್ನು ತಮಗೆ ಅನುಕೂಲವಾದ ಗಾಳಿಯುಳ್ಳ ಮತ್ತು ಎದುರಿಗೆ ಸೂರ್ಯರಶ್ಮಿ ಬೀಳದ ಪ್ರದೇಶವನ್ನು ಆಕ್ರಮಿಸುವುದು. ತಮ್ಮ ಶಿಬಿರಗಳಿಗೆ ಶತ್ರು ಸೈನಿಕರು ಪ್ರವೇಶಿಸದಂತೆ ನೋಡಿಕೊಳ್ಳುವುದು. ಶತ್ರು ಸೈನ್ಯದೊಳಗೆ ಹೊಕ್ಕಿ ಅವರಲ್ಲಿ ಭಯವನ್ನು ಉಂಟುಮಾಡುವುದು. ಆಯಾಸದಿಂದ ಬಳಲಿದ ತನ್ನ ಸೈನ್ಯಕ್ಕೆ ಸಹಾಯ ಮಾಡುವುದು. ಶತ್ರು ಸೈನಿಕರನ್ನು ಹಿಂಬಾಲಿಸಿ ಬಂಧಿಸುವುದು. ಬಂಧಿಸಲ್ಪಟ್ಟ ತನ್ನವರನ್ನು ಬಿಡಿಸುವುದು. ಹಿಂದೆ, ಮುಂದೆ ಮತ್ತು ಪಾರ್ಶ್ವಗಳಿಂದ ಶತ್ರುಸೈನ್ಯಕ್ಕೆ ಹೊಡೆತವನ್ನು ನೀಡುವುದು ಸೋತ ಶತ್ರುಸೈನ್ಯವನ್ನು ಬೆನ್ನಟ್ಟುವುದು ಚದುರಿರುವ ತನ್ನ ಸೈನ್ಯವನ್ನು ಒಂದುಗೂಡಿಸುವುದು. ಇವುಗಳೆಲ್ಲಾ ಅಶ್ವದಳವು ನಿರ್ವಹಿಸುತ್ತಿದ್ದ ಕಾರ್ಯಗಳಾಗಿವೆ. ಕೌಟಲ್ಯನು ಹೇಳಿರುವ ಎಲ್ಲಾ ಕರ್ತವ್ಯಗಳು ಮೈಸೂರು ಒಡೆಯರ ಕಾಲಕ್ಕೂ ಪ್ರಸ್ತುತವಾಗಿದ್ದವು.[1]

ಮೈಸೂರಿನ ಚರಿತ್ರೆಯ ಪುಟಗಳಲ್ಲಿ ರಾಜಒಡೆಯರ್ ಅಧಿಕಾರಕ್ಕೆ ಬರುವ ಮುಂಚೆ ಅಶ್ವದಳದ ಉಲ್ಲೇಖವೇ ನಮಗೆ ಸಿಗುವುದಿಲ್ಲ. ರಾಜಒಡೆಯರ್ ಕ್ರಿ.ಶ.1584ರಲ್ಲಿ ರಾಜ್ಯದ ಗಡಿಯನ್ನು ವಿಸ್ತರಿಸುವ ಕಾರ್ಯಕ್ಕೆ ಕೈಹಾಕಿದ ಮೇಲೆ; ಅಕ್ಕಿ ಹೆಬ್ಬಾಳು, ರಂಗಸಮುದ್ರ, ನರನಳ್ಳಿ, ಅರಕೆರೆ, ಸೋಸಲೆ, ಬನ್ನೂರು,[02] ಕನ್ನಂಬಾಡಿ, ಯಳಂದೂರು ಸತ್ಯಗಾಲ, ಬೇಲೂರು, ಗ್ರಾಮ,

ಮಾವತ್ತೂರು, ಸರಗೂರು, ಉಮ್ಮತ್ತೂರು, ಹರದನಹಳ್ಳಿ,[3] ತಲಕಾಡು, ಕಳಲೆ, ಮಳಲವಾಡಿ, ಬಿಳಿಕೆರೆ, ಮೂಗೂರು, ಕಿಕ್ಕೇರಿ, ಹೊಸಹೊಳಲು, ಶ್ರೀರಂಗಪಟ್ಟಣ, ಕಾರಗಳ್ಳಿಗಳನ್ನು ಕ್ರಮವಾಗಿ ಜಯಿಸಿ ಅವರಲ್ಲಿ ಅಳಿದುಳಿದ ಕುದುರೆಗಳನ್ನು ತಮ್ಮ ವಶಮಾಡಿಕೊಂಡು ಸೈನ್ಯಕ್ಕೆ ಸೇರಿಸಿಕೊಂಡರು. ರಾಜಒಡೆಯರ ನಂತರ ಅಧಿಕಾರಕ್ಕೆ ಬಂದ ನಾಲ್ಕನೆಯ ಚಾಮರಾಜ ಒಡೆಯರು(ಕ್ರಿ.ಶ.1604–1617) ನಾಗಮಂಗಲದ ಅಲ್ಲಿನ ಪಾಳೆಯಗಾರನ ಮೇಲೆ ದಾಳಿಮಾಡಿ, ಅವನಿಂದ ಕುದುರೆಗಳನ್ನು ಕಿತ್ತುಕೊಂಡು ತಮ್ಮ ಅಶ್ವದಳಕ್ಕೆ ಸೇರಿಸಿಕೊಂಡರು. ರಣಧೀರ ಕಂಠೀರವ ಎಂದೇ ಬಿರುದನ್ನು ಪಡೆದಿದ್ದ ಕಂಠೀರವ ನರಸರಾಜ ಒಡೆಯರು ಕ್ರಿ.ಶ.1641 ರಿಂದ 1648ರ ವರೆಗೆ ವಿವಿಧ ಪಾಳೆಯಗಾರರ ಮೇಲೆ ದಾಳಿಗಳನ್ನು ಮಾಡಿ, ಅವರಿಂದ ಸೀಮೆಗಳನ್ನು ಮತ್ತು ಅವರ ಕುದುರೆಗಳನ್ನು ಕಿತ್ತುಕೊಂಡು ತಮ್ಮ ಸೈನ್ಯಕ್ಕೆ ಸೇರಿಸಿಕೊಂಡರು.

ಬಿಜಾಪುರದ ರಣದುಲ್ಲಾಖಾನನು ಶ್ರೀರಂಗಪಟ್ಟಣದ ಮೇಲೆ ದಾಳಿ ಮಾಡಿದಾಗ ಆತನಲ್ಲಿ 40,000 ಕುದುರೆಗಳನ್ನು ಹೊಂದಿದ್ದ ಬೃಹತ್ ಅಶ್ವದಳವಿದ್ದಿತು.[4] ಇಷ್ಟು ಬೃಹತ್ ಮೊತ್ತದ ಸೈನ್ಯವು ಖಡ್ಗ ಮತ್ತು ಭಲ್ಲೆಗಳನ್ನು ಹೊಂದಿದ ಪರಿಣಿತರಿಂದ ಕೂಡಿದ್ದು ಪರಾಕ್ರಮದಿಂದ ಯುದ್ಧ ಮಾಡಿತು. ಆದರೆ ಈ ಯುದ್ಧದಲ್ಲಿ ಸೋತು ಓಡಿಹೋಗುತ್ತಿದ್ದ ಬಿಜಾಪುರದ ಸೈನ್ಯವನ್ನು ಹಿಂಬಾಲಿಸಿ, ಮತ್ತೆ ಅವರ ಮೇಲೆ ದಾಳಿಮಾಡಿ ಅವರನ್ನು ಸೋಲಿಸಿದರು. ಯುದ್ಧದಲ್ಲಿ ಬಳಕೆಯಾಗುವ ಕುದುರೆಗಳಿಗೆ ಅಷ್ಟೇ ಅಲ್ಲದೆ ಅರಮನೆಯಲ್ಲಿದ್ದ ಮತ್ತು ಸಾರಿಗೆಯಂತಹ ಇತರೆ ಚಟುವಟಿಕೆಗಳಿಗೆ ಬಳಸಲಾಗುತ್ತಿದ್ದ ಆನೆ, ಒಂಟೆ, ಎತ್ತು, ಕತ್ತೆಗಳಿಗೆ ಹುಲ್ಲುಮೇದೆಗಳನ್ನು ಪ್ರಾಣಿಗಳಿಗೆ ಆಹಾರದ ಕೊರತೆ ಬಾರದಂತೆ ಹಾಕಿಸಿದರು. ದೊಡ್ಡದೇವರಾಜ ಒಡೆಯರು (ಕ್ರಿ.ಶ.1659–1673) ಘಟ್ಟದ ಮೊದಲಿಯಾರನಿಂದ ವಾಮಲೂರು ಮೊದಲಾದ ಪ್ರದೇಶಗಳನ್ನು ಅಲ್ಲದೆ ಸಖರಾಯಪಟ್ಟಣ, ವಸ್ತಾರೆ, ಮಧುರೆ, ತಿರುಚನಾಪಳ್ಳಿ ಮೊದಲಾದ ದೂರದ ಪ್ರದೇಶಗಳನ್ನು ಗೆಲ್ಲಲು ಅಶ್ವದಳವು ಕಾರಣವಾಯಿತು. ನರಸೀಪುರದ ಲಕ್ಷಣಪ್ಪ ನಾಯಕನನ್ನು ಸೋಲಿಸಿ ಅವನಿಂದಲೂ ಕುದುರೆಗಳನ್ನು ವಶಪಡಿಸಿಕೊಂಡು ಪೊಗಧಿಯನ್ನು ನೀಡುವಂತೆ ಮಾಡಿದರು.

ಚಿಕ್ಕದೇವರಾಜ ಒಡೆಯರ ಕಾಲದಲ್ಲಿ(ಕ್ರಿ.ಶ.1673–1704) ಬೆಂಗಳೂರಿನ ಮೇಲೆ ಮೊಘಲರು ದಾಳಿ ಮಾಡಿದರು. ಆದ್ದರಿಂದ ರಾಜ್ಯದ ರಕ್ಷಣೆಗೆ ಹೆಚ್ಚುವರಿ ಸೈನ್ಯದ ಅಗತ್ಯವನ್ನು ಮನಗಂಡ ಚಿಕ್ಕದೇವರಾಜ ಒಡೆಯರು ಹೊಸದಾಗಿ 12,000 ಅಶ್ವದಳವನ್ನು ನೇಮಿಸಿಕೊಂಡರು. ಮರಾಠರು ಶ್ರೀರಂಗಪಟ್ಟಣದ ಮೇಲೆ ಆಕ್ರಮಣ ಮಾಡಿದಾಗ ರಾತ್ರಿವೇಳೆ ತಮ್ಮ ಸೈನ್ಯದಲ್ಲಿದ ಆವಿನದನಗಳ ಕೊಂಬಿಗೆ ಪಂಜುಗಳನ್ನು ಕಟ್ಟಿಸಿ ಅವುಗಳಿಂದ ಮರಾಠರ ಮೇಲೆ ದಾಳಿ ಮಾಡಿಸಿದರು. ಮರಾಠರು ಈ ಅನಿರೀಕ್ಷಿತ ದಾಳಿಯಿಂದ ಕಂಗಾಲಾಗಿ ಯುದ್ಧ ಮಾಡಲಾರದೆ ಸೋತುಹೋದರು. ಈ ಅನಿರೀಕ್ಷಿತ ಯುದ್ಧದಲ್ಲಿ ಸೋತ ಮರಾಠರಿಂದ ಅಪಾರವಾದ ಅಶ್ವಗಳನ್ನು ಕಿತ್ತುಕೊಂಡು ಅವುಗಳನ್ನು ತಮ್ಮ ಸೈನ್ಯದಲ್ಲಿ ಸೇರಿಸಿಕೊಂಡರು. ಹೈದರನ ಚಿಕ್ಕಪ್ಪನಾದ ಗುಲಾಂ ಹೈದರಲಿ ಸಾಹೇಬನು ಶ್ರೀರಂಗಪಟ್ಟಣಕ್ಕೆ ಸೇರಿದ್ದ ಮಧುಗಿರಿಯಲ್ಲಿ ಮತ್ತು 50 ಕುದುರೆಗಳಿಗೆ ಗೊತ್ತುದಾರನಾಗಿದ್ದನು.[5] ದೇವನಹಳ್ಳಿ ಪಾಳೆಯಗಾರ ಮತ್ತು ಮೈಸೂರಿನ ನಡುವೆ ನಡೆದ ದೇವನಹಳ್ಳಿ ಯುದ್ಧದಲ್ಲಿ ಹೈದರನ ಶೌರ್ಯ ಸಾಹಸಗಳಿಂದ ಹೋರಾಡಿ ಮೈಸೂರು ಸೈನ್ಯ ಜಯಶಾಲಿಯಾಗಲು ಕಾರಣನಾದನು. ಈ ವಿಜಯದಲ್ಲಿ ಪ್ರಮುಖಪಾತ್ರ ವಹಿಸಿದ ಹೈದರನು ಮೈಸೂರಿನ ರಾಜಪ್ರತಿನಿಧಿಯಾದ ಕತ್ತಿಗೋಪಾಲರಾಜೆ ಅರಸರ ಕೃಪೆಗೆ ಪಾತ್ರನಾಗಿ 500 ಕಾಲಾಳುಗಳು ಮತ್ತು 200 ಕುದುರೆಗಳ ಮುಖಂಡನಾಗಿ ಕಾಲಕ್ರಮೇಣ ತನ್ನ ಶಕ್ತಿ ಸಾಮರ್ಥಗಳಿಂದ ಸೈನ್ಯದಲ್ಲಿ ಉನ್ನತ ಸ್ಥಾನವನ್ನು ಪಡೆದನು. ಹೈದರನು ಮರಾಠರ ಪ್ರಭಾವದಿಂದ ಅಶ್ವದಳದ ಮಹತ್ವವನ್ನು ಅರಿತುಕೊಂಡು ಪ್ರಾಮುಖ್ಯತೆ ಮತ್ತು ಹೆಚ್ಚಿನ ಪ್ರೋತ್ಸಾಹಗಳನ್ನು ನೀಡಿದನು. ಇದು ಅಶ್ವದಳದ ಬಳಕೆ ಮತ್ತು ಯುದ್ಧ ಸಮಯದಲ್ಲಿ ಸೈನ್ಯವನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವೇಗದ ಸಾರಿಗೆಗೆ

ದಾರಿಮಾಡಿಕೊಟ್ಟಿತು.

ಹೈದರ್ ಅಲಿಯು ಕ್ರಿ.ಶ.1758ರಲ್ಲಿ ಮೈಸೂರಿನ ದಳವಾಯಿಯಾಗಿ ನೇಮಕವಾದಾಗ ಮೂರುಸಾವಿರ ಅಶ್ವಗಳನ್ನು ಸೈನ್ಯದಲ್ಲಿ ಖಾಯಂ ಆಗಿ ಉಳಿಸಿಕೊಂಡು ನಾಲ್ಕುಸಾವಿರ ಕುದುರೆಗಳನ್ನು ಸೇವೆಯಿಂದ ಬಿಡುಗಡೆಗೊಳಿಸಿದನು. ಹೀಗೆ ಸೇವೆಯಿಂದ ಬಿಡುಗಡೆ ಹೊಂದಿದ ಅಶ್ವದಳದ ಸೈನಿಕರನ್ನು ತನ್ನ ಸೈನ್ಯದಲ್ಲಿದ್ದ ಖಾಯಂ ಅಶ್ವದಳದಿಂದ ದಾಳಿ ಮಾಡಿಸಿದನು.[5] ಇದರಿಂದ ಮೈಸೂರು ಸೈನ್ಯವು ಶತ್ರುಗಳನ್ನಲ್ಲದೆ ತಮ್ಮವರನ್ನೇ ಕೊಳ್ಳೆಹೊಡೆಯುತ್ತಿತ್ತು. ಹೈದರನಿಗಿಂತ ಮುಂಚೆ ದಳವಾಯಿಯಾಗಿದ್ದ ನಂಜರಾಜಯ್ಯನು ಅಧಿಕಾರದಿಂದ ತೆರೆಮರೆಗೆ ಸರಿಯುತ್ತಿದ್ದಾಗ ಒಂದು ಸಾವಿರ ಕುದುರೆಗಳನ್ನು ತಮ್ಮಲ್ಲಿ ನೌಕರಿಗೆ ಬಿಟ್ಟರೆ ರಾಜ್ಯಕ್ಕೆ ಅಗತ್ಯವಾದ ವೇಳೆಯಲ್ಲಿ ಸೈನ್ಯವನ್ನು ತೆಗೆದುಕೊಂಡು ಬರುತ್ತೇನೆಂದು ಹೇಳಿ ತಾನು ಮೈಸೂರಿನಲ್ಲಿಯೇ ಉಳಿದುಕೊಂಡನು. ಮೈಸೂರು, ಬೆಟ್ಟದಪುರ, ಕೊಣನೂರು ಮುಂತಾದ ತನ್ನ ಅಧೀನದಲ್ಲಿದ್ದ ಪ್ರದೇಶಗಳಲ್ಲಿ ಆ ಒಂದು ಸಾವಿರ ಸೈನ್ಯವನ್ನು ವಿಭಾಗಿಸಿ ಕಾವಲಿಗೆ ನೇಮಿಸಿದರು. ಇದೇ ಸಂದರ್ಭದಲ್ಲಿ ಮರಾಠರ ಸರದಾರ ಮಿರ್ಜಿ ಗೋಪಾಲರಾಯನು 4,000 ಅಶ್ವದಳದೊಡನೆ ಬೆಂಗಳೂರಿಗೆ ಮುತ್ತಿಗೆ ಹಾಕಿದನು.[7] ಆದರೆ ನಂಜರಾಜಯ್ಯನ ಕಡೆಯಿದ್ದ ಒಂದು ಸಾವಿರ ಅಶ್ವದಳವು ಈ ಯುದ್ಧದಲ್ಲಿ ಪಾಲ್ಗೊಳ್ಳಲಿಲ್ಲ. ಹೈದರನು ಮೈಸೂರು ಲಡಾಯಿಯಲ್ಲಿ ತನ್ನ ಸೈನ್ಯ ಕಡಿಮೆಯಾಯಿತೆಂದು ಅಶ್ವದಳವನ್ನು ಹೆಚ್ಚಿಸಿಕೊಳ್ಳಲು ಮೈಸೂರಿನ ಅರಸರಿಂದ ಅವಕಾಶವನ್ನು ಪಡೆದನು. ಕ್ರಿ.ಶ.1770ರಲ್ಲಿ ತ್ರಯಂಬಕಮಾಮನು ನಲವತ್ತು ಸಾವಿರ ಕುದುರೆಪೌಜು ಸಹಿತವಾಗಿ ಶ್ರೀರಂಗಪಟ್ಟಣ ಮತ್ತು ಆರ್ಕಾಟುಗಳನ್ನು ಗೆದ್ದುಕೊಳ್ಳಲು ಸಖರಾಯಪಟ್ಟಣ ಮೊದಲಾದ ಪ್ರದೇಶಗಳ ಮೇಲೆ ದಾಳಿ ಮಾಡಿದಾಗ ಬಾರ್ ಇಲಾಖೆಯ ಅಹಷಾಂ[8] ಅಶ್ವದಳದೊಂದಿಗೆ ಯುದ್ಧಕ್ಕೆ ಹೋಗಿ ಸೋತುಹೋದನು. ಆದರೆ ಟಿಪ್ಪು ಈ ಯುದ್ಧಕ್ಕೆ ನಾಲ್ಕು ಸಾವಿರ ಅಶ್ವದಳದೊಂದಿಗೆ ಯುದ್ಧಕ್ಕೆ ಹೊರಟು ಶತ್ರುಗಳನ್ನು ಸೋಲಿಸಿದನು.[9] ಕಡಪಾದ ಮೇಲಿನ ದಾಳಿಯಿಂದ ಅಲ್ಲಿನ ಕುದುರೆಗಳನ್ನು ತನ್ನ ಸೈನ್ಯದಲ್ಲಿ ಸೇರಿಸಿಕೊಳ್ಳಲಾಯಿತು. ಆರ್ಕಾಟಿನ ದಾಳಿಗೆ ಶ್ರೀರಂಗಪಟ್ಟಣದಲ್ಲಿ ಕ್ರಿ.ಶ.1780ರಲ್ಲಿ 39,500 ಕುದುರೆ ಸವಾರರು, 13,000 ಬಾರಗೀರ ತಬೇಲೆಯವರು, 18,000 ಸವಾರ ಕಛೇರಿಯವರು 60,000 ಕಡಪಾ ಮೀರಲಿ ಖಾನನ ಸೈನಿಕರು, 2,000 ಸವಣೂರು ಹಕೀಂಖಾನನ ಮಕ್ಕಳ ಕಡೆಯ ಸುಮಾರು 500 ಅಲೇಮಾನಿ ಸವಾರರನ್ನು[10] ಹೊಂದಿದ ಮೈಸೂರು ಸಿಲಾದಾರರೆಂದೇ ಪ್ರಸಿದ್ಧಿಯಾಗಿತ್ತು. ಸಿಲಾದಾರ ಎಂದರೆ ಕುದುರೆಗಳನ್ನು ಸ್ವಂತ ಖರ್ಚಿನಲ್ಲಿ ಸಾಕುವ ಮತ್ತು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸಲು ಸರ್ಕಾರದ ವತಿಯಿಂದ ವೇತನವನ್ನು ಪಡೆಯುವಂತಹ ಸೈನಿಕರಾಗಿದ್ದರು. ಇಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ 12,000 ಸಿಲಾದಾರ ಪಡೆಯಿದ್ದಿತು. ಯುದ್ಧ ಮತ್ತು ಶಾಂತಿಯು ಕಾಲದಲ್ಲಿ ಕೆಲವರನ್ನು ಮಾತ್ರ ರಾಜ್ಯದ ಒಳಗಡಿಯ ಬಂದೋಬಸ್ತಿಗೋಸ್ಕರ ಅವಶ್ಯಕವಾದ ಸ್ಥಳಗಳಲ್ಲಿರಿಸಿ, ಮಿಕ್ಕ ಸೇನೆಯನ್ನು ಶ್ರೀರಂಗಪಟ್ಟಣದ ಸಮೀಪದಲ್ಲಿ ಠಾಣೆ ಮಾಡಿಸಲಾಗುತ್ತಿತ್ತು.[11] ಹೈದರನು ಈ ಅಶ್ವಪಡೆಯನ್ನು ಎರಡು ವಿಭಾಗಗಳಾಗಿ ವಿಂಗಡಿಸಿದ್ದನು. ಅವುಗಳೆಂದರೆ ಖಾಸತಬೇಲಿ ಮತ್ತು ಸಿಲಾದಾರರು. ಸಿಲಾದಾರರು ಈ ಮೊದಲೇ ಇದ್ದರು. ಆದರೆ ಖಾಸತಬೇಲಿಯನ್ನು ಹೊಸದಾಗಿ ನೇಮಿಸಿ 20,000 ಹೆಣ್ಣುಕುದುರೆಗಳನ್ನು ಖಾಸಾತಬೇಲಿಗೆ ಹೊಸದಾಗಿ ಸೇರಿಸಲಾಯಿತು. ಈ ಖಾಸಾತಬೇಲಿಯಲ್ಲಿ ಒಟ್ಟಾರೆ 14,000 ಅಶ್ವಗಳಿದ್ದವು. ಸಿಲೇದಾರ ಗುಂಪಿನಲ್ಲಿ 28,000 ಅಶ್ವಗಳಿದ್ದವು. ಸಿಲೇದಾರರ ತಲಬು (ಪ್ರೋತ್ಸಾಹಧನ) ಮಾತ್ರ ಸರ್ಕಾರದಿಂದ ಪಾವತಿಯಾಗುತ್ತಿತ್ತು. ಆದರೆ ಆಯಾಯ ಸಿಲೇದಾರರು ತಮ್ಮದೆ ಆದ ಕುದುರೆಗನ್ನು ತಾವೇ ದಾಣಾಚಾರ(ಕುದುರೆಗಳನ್ನು ಸಾಕುವ ನೇರಹೊಣೆಗಾರಿಕೆ) ಖರ್ಚನ್ನು ವಹಿಸಿಕೊಳ್ಳುತ್ತಿದ್ದರು. ಸವಣೂರು ನವಾಬನು 2,000, ಚಿತ್ರದುರ್ಗ ಮತ್ತು ರಾಯದುರ್ಗಗಳ ಪಾಳೆಯಗಾರರು 7,000 ಕುದುರೆಗಳನ್ನು ಯಾವಾಗಲೂ ಯುದ್ಧಕ್ಕೆ ಸಿದ್ಧತೆ ಮಾಡಿಕೊಳ್ಳಬೇಕಿತ್ತು. ಈ ಕಾಲದಲ್ಲಿ ಅಶ್ವದಳಕ್ಕೆ ಒಟ್ಟು 51,000 ಕುದುರೆಗನ್ನು

ಸೇರಿಸಿಕೊಳ್ಳಲಾಯಿತು. ಒಂದೊಂದು ಸಾವಿರಕ್ಕೆ ಒಂದೊಂದು ರಿಸಾಲೆಯಂತೆ ವಿಭಾಗಗಳಿದ್ದವು.[12] ಈ ಸಿಲಾದಾರರು 4,000 ಅಶ್ವಗಳೊಂದಿಗೆ ಶ್ರೀರಂಗಪಟ್ಟಣದಲ್ಲಿದ್ದರೆ ಉಳಿದವರು ರಾಜಧಾನಿಯಿಂದ 50ಕಿ.ಮೀ ದೂರದ ವ್ಯಾಪ್ತಿಯಲ್ಲಿ ನೇಮಕವಾಗಬೇಕಿತ್ತು.

ಟಿಪ್ಪೂ ಕಾಲದಲ್ಲಿ ಈ ಖಾಸ್‌ತಬೆಲಿಯ ಮೊತ್ತವು 7,000 ಆಗಿದ್ದಿತು. ಆದರೆ ಆತನ ಆಪ್ತ ಅಧಿಕಾರಿಯಾದ ಮೀರ್‌ಸಾಧಿಕ್ 1,500 ಸಿಲೆದಾರರನ್ನು ಹೊಂದಿದ್ದನು. ಇದು ಹೈದರನ ಕಾಲದಂತೆಯೇ ತಮ್ಮ ಕಾರ್ಯವನ್ನು ನಿರ್ವಹಿಸುತ್ತಿತ್ತು. ಶ್ರೀರಂಗಪಟ್ಟಣವು ಬ್ರಿಟಿಷರ ವಶವಾದಾಗ ಮೈಸೂರಿನ ಸೈನ್ಯದಲ್ಲಿ ಸುಮಾರು 12,500 ಕುದುರೆಗಳಿದ್ದವು. ಇದರಲ್ಲಿ 3,200 ಕುದುರೆಗಳನ್ನು ಬ್ರಿಟಿಷರು ತಮ್ಮ ಸ್ವಾಧೀನ ಪಡಿಸಿಕೊಂಡರು. ಟಿಪ್ಪುವಿನ ಸೇನಾನಾಯಕರಲ್ಲಿ 1,138 ಕುದುರೆಗಳು ಉಳಿದರೆ ಮಿಕ್ಕ 8,162 ಕುದುರೆಗಳು ಚದುರಿ ದೇಶಾಂತರ ಹೊರಟುಹೋದವು. ಕ್ರಿ.ಶ.1808ರಲ್ಲಿನ ಮೈಸೂರು ಮತ್ತು ಬ್ರಿಟಿಷರ ನಡುವಿನ ಒಪ್ಪಂದದ ನಿಯಮದ ಪ್ರಕಾರ 500 ಬಾರ್ಗಿರ್‌ನ(ಖಾಸ್‌ತಬೆಲಿ) ಕುದುರೆಯಲ್ಲಿ 3,500 ಸಿಲೆದಾರರು ಸೈನ್ಯದಲ್ಲಿ ಇರಬೇಕೆಂದು ತೀರ್ಮಾನವಾಯಿತು. ಪೂರ್ಣಯ್ಯನವರ ಕೊನೆಯ ಆಡಳಿತಾವಧಿಯಲ್ಲಿ 3,314 ಜನ ಸೇವಕರು, 3,190 ಕುದುರೆಗಳೂ ಇರುವಂತೆ ನೋಡಿಕೊಳ್ಳಲಾಯಿತು. ಇವುಗಳ ಖರ್ಚು ವಾರ್ಷಿಕವಾಗಿ 2,70,613 ಕಂಠೀರಾಯಿ ರೂಪಾಯಿಗಳಾಗಿದ್ದವು.[13]

ಕ್ರಿ.ಶ.1768ರವರೆಗೆ ಈಗಿನ ರಾಮನಗರವೆಂದು ಕರೆಯುವ ಅಂದಿನ ಕ್ಲೋಸ್‌ಪೇಟೆಗೆ ಅಶ್ವದಳದ ವರ್ಗಾವಣೆಯಾಯಿತು. ದಿವಾನ್ ಪೂರ್ಣಯ್ಯನವರು ಕ್ಲೋಸ್‌ಪೇಟೆಯ ಕುದುರೆ ಸಾಕಾಣಿಕೆ ಕೇಂದ್ರದ ನಿರ್ಮಾಣಮಾಡಿದ ಮೇಲೆ ಸಿಲಾದಾರ್‌ನ ಮುಖ್ಯಸ್ಥನನ್ನೇ ಅಶ್ವದಳದ ಕುದುರೆ ರೆಜಿಮೆಂಟಿನ ಮುಖ್ಯಸ್ಥನನ್ನಾಗಿ ನೇಮಿಸಿದರು. ಅಲ್ಲದೆ ಪೂರ್ಣಯ್ಯನವರು ಸೈನ್ಯವನ್ನು ತೆಗೆದುಕೊಂಡು ಗುತ್ತಿಯನ್ನು ಮುತ್ತಲು ಹೊರಟ ಬ್ರಿಟಿಷರಿಗೆ ಈ ಕೇಂದ್ರದಿಂದ 1,600 ಕುದುರೆಗಳನ್ನು ಸರಬರಾಜು ಮಾಡಿ ಮದ್ರಾಸ್ ಗೌರ್ನರ್‌ನ ಮೆಚ್ಚುಗೆಯನ್ನು ಗಳಿಸಿದರು. ರಾಮನಗರದಲ್ಲಿ ಈ ಕುದುರೆ ಕೇಂದ್ರವು ಕುರುಪ್ ಲಾಯವೆಂಬ ಕೇರಿಯಾಗಿದೆ. ಆದರೆ ಕ್ಲೋಸ್‌ಪೇಟ್‌ಯ ಬಿಸಿಯಾದ ವಾತಾವರಣ ಮತ್ತು ಅಪೌಷ್ಟಿಕವಾದ ಆಹಾರದ ಕಾರಣದಿಂದ ಕ್ರಿ.ಶ.1775ರಲ್ಲಿ ಕುಣಿಗಲ್ಲಿನಲ್ಲಿ ಹೊಸದಾಗಿ ಕುದುರೆಗಳ ಸಾಕಾಣಿಕಾ ಕೇಂದ್ರವನ್ನು ನಿರ್ಮಿಸಿ ಅಶ್ವಗಳನ್ನು ವರ್ಗಾಯಿಸಲಾಯಿತು. ಈ ಕುಣಿಗಲ್ಲು ಪ್ರದೇಶ ಅತ್ಯಂತ ಸಮತಟ್ಟಾದ ಬಯಲು ಪ್ರದೇಶವಾಗಿದ್ದು ಇಲ್ಲಿ ಕುದುರೆಗಳು ಮತ್ತು ಇತರೆ ಪ್ರಾಣಿಗಳಿಗೆ ಬೇಕಾಗುವ ಮೇವಿನಲ್ಲಿ ಕ್ಯಾಲ್ಸಿಯಂ ಅಂಶವು ಹೇರಳವಾಗಿ ದೊರೆಯುತ್ತದೆ. ಜೊತೆಗೆ ಇಲ್ಲಿನ ಸಮಶೀತೋಷ್ಣ ವಾಯುಗುಣವು ಅತ್ಯಂತ ಆಹ್ಲಾದಕರವಾಗಿದ್ದು ಕುದುರೆಗಳ ದೈಹಿಕ ಬೆಳವಣಿಗೆಗೆ ಸಹಕಾರಿಯಾಗುತ್ತದೆ. ವೈಜ್ಞಾನಿಕವಾಗಿ ರಾಮನಗರದಲ್ಲಿದ್ದ ಕುದುರೆ ಸಾಕಣೆ ಕೇಂದ್ರವನ್ನು ಕುಣಿಗಲ್ಲಿಗೆ ವರ್ಗಾಯಿಸಲಾಯಿತು. ಅಲ್ಲದೆ ಅಂದಿನ ಮೈಸೂರಿನ ಸೈನ್ಯ ಮತ್ತು ಕುದುರೆ ರೇಸ್‌ಗಳಂತಹ ಕಾರಣದಿಂದ ಅವಶ್ಯಕವಾಗಿದ್ದ ಕ್ರೀಡೆಗಳಿಗೆ ಕುದುರೆಗಳನ್ನು ಈ ಕುದುರೆ ಸಾಕಣಿಕಾ ಕೇಂದ್ರದಿಂದಲೇ ಒದಗಿಸಲಾಗುತ್ತಿತ್ತು. 'ಕಿಂಬರ್ಲಿ' ಎಂಬ ಕುದುರೆಯು ಕ್ರಿ.ಶ.1897ರಲ್ಲಿ ಅಮೇರಿಕಾದಲ್ಲಿ ವಿಶ್ವಕಪ್ಪನ್ನು ಗೆದ್ದು ವಿಶ್ವವಿಖ್ಯಾತಿ ಪಡೆದಿತ್ತು. ಆದ್ದರಿಂದ ಈ ಪ್ರದೇಶದಲ್ಲಿನ ಕುದುರೆಗಳು ದೈಹಿಕವಾಗಿ ಅತ್ಯಂತ ಬಲಿಷ್ಟವಾಗಿರುವ ಕಾರಣದಿಂದ ಯೂರೋಪ್ ಮತ್ತು ಆಸ್ಟ್ರೇಲಿಯಾಗಳಿಗೆ ಇಂದಿಗೂ ಕೂಡ ರಫ್ತಾಗುತ್ತವೆ. [14]

ಬ್ರಿಟಿಷರ ಕಾಲದಲ್ಲಿ ಭಾರತೀಯ ಸೈನ್ಯದ ಅಶ್ವದಳಕ್ಕೆ ಸೈನಿಕರು ನೇಮಕವಾಗಲು ದೈಹಿಕವಾಗಿ ಅತ್ಯಂತ ಬಲಿಷ್ಟವಾಗಿದ್ದು, ಕನಿಷ್ಠ 21 ಮತ್ತು ಗರಿಷ್ಠ 31 ವರ್ಷಗಳ ಅರ್ಹತೆಯನ್ನು ಹೊಂದಿರುವುದು.[15] ಪ್ರಮುಖ ಅರ್ಹತೆಯಾಗಿತ್ತು. ಅಲ್ಲದೆ ಇವರು ಅಶ್ವದಳದಲ್ಲಿ ಕಾರ್ಯನಿರ್ವಹಿಸಬೇಕಾದ ಸಂದರ್ಭದಲ್ಲಿ ಕುದುರೆಗಳಿಗೆ ಹೊಡೆಯುವುದು, ಗಾಯಗೊಳಿಸುವಂತಹ ಯಾವುದೇ ದೈಹಿಕ ಹಿಂಸೆಗಳನ್ನು ನೀಡುವಂತಿಲ್ಲ ಎಂಬ ಕಾನೂನುಗಳಿದ್ದವು. ಒಂದು ವೇಳೆ ಹಾಗೇನಾದರೂ ಮಾಡಿದರೆ ಆ ಸೈನಿಕನು ಕಾರಾಗೃಹವಾಸ, ದಂಡ ವಸೂಲಾತಿ, ವೇತನ ತಡೆಹಿಡಿಯುವಿಕೆ, ರಜೆ ನೀಡದಿರುವುದು, ಸೇವೆಗಳಲ್ಲಿ ಹಿಂಬಡ್ತಿ ನೀಡುವಿಕೆ[16] ಮೊದಲಾದ ಸೈನಿಕ ಶಿಸ್ತುಕ್ರಮಗಳಿಗೆ ಒಳಪಡಬೇಕಾಗಿತ್ತು.

ಕೊನೆಟಿಪ್ಪಣಿಗಳು


1. ಸೋಮಶೇಖರ್ ಎಸ್.ವೈ, 2009, ವಿಜಯನಗರ ಕಾಲದ ಸೈನ್ಯ ವ್ಯವಸ್ಥೆ ಮತ್ತು ಯುದ್ಧನೀತಿ, ಪು.45.
2. ರಾಮಕೃಷ್ಣರಾವ್ ಬಿ., 1916, ಶ್ರೀಮನ್ಮಹಾರಾಜರ ವಂಶಾವಳಿ ಭಾಗ–1, ಪು.65.
3. ಅದೇ., ಪು.69.
4. ಅದೇ., ಪು.79.
5. ಅದೇ., ಪು.187.
6. ಅದೇ., ಪು.192.
7. ಅದೇ., ಪು.208.
8. ಅದೇ., ಪು.209.
9. ಅದೇ., ಪು.227.
10. ಅದೇ., ಸಂಪುಟ–2, ಪು.15.
11. ಅದೇ., ಪು.ಸಂ.16.
12. ಅದೇ., ಪು.ಸಂ.17.
13. ಪತ್ರಗಾರ ಇಲಾಖೆ.,1940., ಕಿಲ್ಲೆಕಛೇರಿ., ಕಡತ ಸಂಪುಟ–72, ಪು.3.
14. ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ. ಕುಣಿಗಲ್ ಸ್ಟಡ್ ಫಾರಂ (ಮಾಹಿತಿ ನೀಡಿದವರು ವಿನೋದ್).
14. ಕಿಲ್ಲೆ ಕಛೇರಿ, ಪೂರ್ವೋಕ್ತ, 1921. ಕಡತ ಸಂಪುಟ–32, ಪು.13.